**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 990/2023**

**ಫಿರ್ಯಾದುದಾರರು** ಸೆಂಟ್ ಮಿಲ್ಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ,
ಕಾರವಾರ, ಭಟ್ಕಳ ಶಾಖೆ, ಪ್ರತಿನಿಧಿಸುವವರು,
ಇದರ ಲೋನ್ ಸೆಕ್ಷನ್ ಇನ್‌ಚಾರ್ಜ್
ಶ್ರೀ ಕೀರ್ತಿರಾಜ್ ಪಿ. ಶಿರಾಲಿ

**- ವಿರುದ್ಧ -**

**ಆರೋಪಿತರು** ಶ್ರೀ ಮೊಹಮ್ಮದ್ ಮುಜಾಮಿಲ್,
ತಂದೆಃ ಅಸ್ಹತ್ ಭಾಷಾ ಫಕೀ ಅಹಮದ್
ವಯಸ್ಸುಃ ವರ್ಷ
ಸಾಃ 67, ಜಟ್ಕಿ ಹೌಸ್ , ಸುಲ್ತಾನ್‌ಸ್ಟ್ರೀಟ್,
ಭಟ್ಕಳ ತಾಲೂಕು-581320.

**ಆಪಾದನೆ**

ಆರೋಪಿಯಾದ ನೀವು ದಿನಾಂಕಃ 26-08-2020 ರಂದು ಪಿರ್ಯಾದಿಯವರಲ್ಲಿ ರೂ.75,000/- (ರೂಪಾಯಿ ಎಪ್ಪತ್ತೈದು ಸಾವಿರ ಮಾತ್ರ) ಹಣವನ್ನು ಸಾಲದ ಖಾತೆ ಸಂಖ್ಯೆ VL No. 977 ರಲ್ಲಿ ವಾಹನ ಸಾಲವಾಗಿ ಪಡೆದುಕೊಂಡು ಶೇಕಡಾ 12.9% ವಾರ್ಷಿಕ ಬಡ್ಡಿ ಮತ್ತು 3.22% ದಂಡದ ಬಡ್ಡಿ ದರದಂತೆ ಮರುಪಾವತಿಸುವುದಾಗಿ ನೀವು ಒಪ್ಪಿಕೊಂಡಂತೆ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾಗಿದ್ದು, ಸದ್ರಿ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ದಿನಾಂಕಃ 12-09-2023 ರಂದು ನೀವು ಕೆನರಾ ಬ್ಯಾಂಕ್, ಭಟ್ಕಳ ಶಾಖೆಯ ಚೆಕ್ಕ ನಂಬರ್ 347638 ನ್ನು ರೂ.99,015/-(ರೂಪಾಯಿ ತೊಂಭತ್ತ ಒಂಭತ್ತು ಸಾವಿರದ ಹದಿನೈದು ಮಾತ್ರ ) ಎಂದು ನಮೂದಿಸಿ ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ಅವರ ವ್ಯವಹಾರದ ಬ್ಯಾಂಕರ್ ರಾದ ದಿ ಫೆಡರಲ್ ಬ್ಯಾಂಕ್ ಭಟ್ಕಳ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರಪಡಿಸಿದಾಗ,"Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 15-09-2023 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 05-10-2023 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ರಿಜಿಸ್ಟರ್ ಅಂಚೆ ಮುಖಾಂತರ ನಿಮಗೆ ಕಳುಹಿಸಿದ್ದು, ನೋಟಿಸು ಮುಟ್ಟಿದ 15 ದಿವಸದೊಳಗಡೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ ಸೂಚಿಸಿದ್ದು ಇರುತ್ತದೆ, ಸದ್ರಿ ನೋಟಿಸ್ಸನ್ನು ನೀವು ಸ್ವೀಕರಿಸದೇ ದಿನಾಂಕಃ 13-10-2023 ರಂದು UNCLAIMED ಎಂದು ವಾಪಾಸ್ಸು ಬಂದಿರುತ್ತದೆ. ಹೀಗೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ - ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ - ಹೌದು

ಪ್ರಶ್ನೆ - ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**ಸಹಿ ಇದೆ/-**

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 18-07-2024. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.